

# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಸೆಪ್ಟೆಂಬರ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 09 ಪ್ರಕಟಣೆ : 20-09-2023

## ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಅಷ್ಟಮಿ ಆಚರಣೆ'

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು **10-09-2023**ನೇ ರವಿವಾರ 'ಅಷ್ಟಮಿ ಆಚರಣೆ' ನಡೆಯಿತು. ಶಾಂಕರತತ್ವ ಅಭಿಯಾನಂ ವತಿಯಿಂದ ಗುರುಸಪರ್ಯಾದ ಬಳಿಕ ರೋಟರಿ ಮಂಗಳೂರು ಹಿಲ್‌ಸೈಡ್ ವತಿಯಿಂದ ನೇತ್ರ, ಇ.ಸಿ.ಜಿ., ಫಿಸಿಯೋತೆರಪಿ, ರಕ್ತದಾನ ಶಿಬಿರದ ಉದ್ಘಾಟನೆ ನಡೆಯಿತು. ಮುಂದೆ ಭಗವದ್ಗೀತೆ ಪಠಣ, ಮುದ್ದುಕೃಷ್ಣ, ಭಕ್ತಿಗೀತೆ, ಮಡಕೆ ಒಡೆಯುವ, ಚಕ್ಕುಲಿ ಸಂಖ್ಯೆ ಊಹನೆ, ಶಂಖ ಊದುವ ಸ್ಪರ್ಧೆ ವಿವಿಧ ವಿಭಾಗದಲ್ಲಿ ನಡೆಯಿತು. ತೀರ್ಪುಗಾರರಾಗಿ ಶ್ರೀ ಸಂಜಯ್ ಕುಮಾರ್ ಪಿ., ಶ್ರೀ ರವಿಶಂಕರ್ ರಾವ್, ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀಮತಿ ಮಂಜುಳಾ ಮುರಳೀಧರ್, ಶ್ರೀಮತಿ ಸುಜಾತಾ ಬೆಳ್ಳೆ, ಶ್ರೀ ಸದಾನಂದ ರಾವ್, ಕು। ವೈಭವಲಕ್ಷ್ಮೀ ಸಹಕರಿಸಿದರು. ಭೋಜನ ಬಳಿಕ ಪ್ರಾರ್ಥನೆಯನ್ನು ಶ್ರೀಮತಿ ಕರುಣ್ ರಾವ್ ಮತ್ತು ಶ್ರೀಮತಿ ಸರೋಜಿನಿ ಕುಡುಪು ಹಾಡಿದರೆ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ್ ಕುಮಾರ್ ಪಿ. ನಡೆಸಿಕೊಟ್ಟರು. ಶ್ರೀ ಶ್ರೀಹರಿ ಅದ್ಯಪಾಡಿ, ಶ್ರೀ ನಾಗರಾಜ ಶರ್ಮ ಸಹಕರಿಸಿದರು. ದಾನಿಗಳಾದ ಇನ್ನ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳನ್ನು ಸನ್ಮಾನಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕು। ಅಂಕಿತಾಶ್ರೀ, ಕು। ಆಕಾಂಕ್ಷ, ಶ್ರೀ ಅಶ್ವಿನ್, ಕು। ಸಮನ್ವಿತಾ ಮತ್ತು ಶ್ರೀಮತಿ ಸೌಜನ್ಯ ವೈಯಕ್ತಿಕ ನೃತ್ಯಪ್ರದರ್ಶನ ನಡೆದವು. ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ನಾಲ್ಕು ತಂಡದ **27** ಕಲಾವಿದರ ನೃತ್ಯ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ರಘುವೀರ್ ಪೆರ್ಡೂರ್ ಉತ್ತಮ ಛಾಯಾಚಿತ್ರಗಳನ್ನು ಒದಗಿಸಿದರು. ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನಾ ನಾಗರಾಜ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ ವ್ಯವಸ್ಥೆಯಲ್ಲಿ ಸಹಕರಿಸಿದರೆ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನವನ್ನು ಡಾ। ಜಯಲಕ್ಷ್ಮೀ ಪ್ರಾಯೋಜಿಸಿದರು. ಶ್ರೀಮತಿ ಪುಷ್ಪಾ ಶ್ರೀನಿವಾಸ್‌ರವರ ಧನ್ಯವಾದ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರ್





















## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್ – 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ •ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು : •ಚೇತನ್ ಶರ್ಮ• ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 ✆ : 9343361618

e-mail : jnanashakthisss@gmail.com


## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

✆ : 9880968032 / 0824-2982095

**ಶಾಖೆಗಳು**

| | |
|---|---|
| ಮಂಗಳೂರು: | ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454 |
| ಪುತ್ತೂರು | ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955 |
| ಬೆಳ್ತಂಗಡಿ | 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944 |
| ಸುರತ್ಕಲ್ | 'ಪೂವ ಆರ್ಕೇಡ್' ✆ : 0824 - 2477895 / 9611550803 |
| ಕಾರ್ಕಳ | 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800 |
| ಸುಳ್ಯ | ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955 |
| ಬಿ.ಸಿ. ರೋಡ್ | ಲಕ್ಷ್ಮೀ ಮಹಲ್ ✆ : 08255 - 233895 / 8792464344 |
| ವಿಟ್ಲ | ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955 |
| ಮೂಡಬಿದ್ರೆ | ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955 |
| ಪದವಿನಂಗಡಿ: | ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917 |
| ಕುತ್ತಾರ್ | ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344 |
| ಕಿನ್ನಿಗೋಳಿ | ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575 |

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. 10,000/- ಠೇವಣಿ ಅವಧಿ : 88 ತಿಂಗಳು

ವಿಶೇಷ ಬಡ್ಡಿದರ : 9.6%

ಸ್ಥಾಪನೆ : 1936 ✆ : 9880968032 0824-2982095

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

ಎಲ್. ನಂ. 366, 'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್'

ಬಿಜೈ ರಸ್ತೆ, ಮಂಗಳೂರು - 575 003

ಮಾನ್ಯರೇ,

ನಮ್ಮ ಸಂಘದ 2022-23ನೇ ಸಾಲಿನ


## 86ನೇ ವಾರ್ಷಿಕ ಮಹಾಸಭೆಯನ್ನು

ತಾ. 24-09-2023ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11-00ಕ್ಕೆ ಸರಿಯಾಗಿ ಶ್ರೀ ಕರುಣ್ ರಾವ್ ಬೆಳ್ಳೆ ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ ಏರ್ಪಡಿಸಲಾಗಿದೆ.

ಸಂಘದ ಸದಸ್ಯರೆಲ್ಲರೂ ಆಗಮಿಸಿ, ಮಹಾಸಭೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

**ಸಾಯಿ ಪ್ರಸಾದ್ ಎಮ್.,** ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಬೆಂಗಳೂರಿನ ಶ್ರೀಮತಿ ಶಶಿಕಲಾ ತಮ್ಮ ಪತಿ ದಿ। ರಾಮಚಂದ್ರ ರಾಮವನ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 50,000/– ಮತ್ತು ಅವರ ತಮ್ಮ ಶ್ರೀ ಗೋಪಾಲ್ ರಾಮವನ ಈ ಹಿಂದೆ ರೂ. 50,000/– ನೀಡಿದ್ದು ಈ ಬಾರಿ ಅವರ ಧರ್ಮಪತ್ನಿ ಶ್ರೀಮತಿ ಪದ್ಮಾ ಕಾಶಿ ಗೋಪಾಲ್ ರೂ. 25,000/– ನೀಡಿದ್ದಾರೆ. ಒಟ್ಟು ಈ ಕುಟುಂಬ ರೂ. 1,25,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ಬೆಂಗಳೂರಿನ ದಿ। ಬಾಲಕೃಷ್ಣರವರ ಸ್ಮರಣಾರ್ಥ ಅವರ ಪುತ್ರ ಕೊಡವೂರು ಶ್ರೀ ರಾಜೇಶ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/– (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.


Prop. : SUDHAKAR BELLE
✆ : 9845193103/ 9481563103

KARAN DIGITAL STUDIO

Sadasukh Building, Nr. Postoffice, Padubidri - 574 111
Opp. Busstand Belman

All Marriage & Other functions Photography & Videography Available



PREETHIKA AUTOMOBILES

✆ 2493633 9845851573

Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003

Dealers in : Minda Switches, M. K. Products, Swiss Auto Products, Power Coils

Muralidhara Rao Adyapadi
Proprietor

Mob : 94480 27259
99803 16434

SPANDANA
Constructions



IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3

CUSTOMER'S SATISFACTION IS OUR MOTTO

# ಅಪಾರಕೀರ್ತಿ ಗಳಿಸಿ...



ಬೆಂಗಳೂರಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ **ಶ್ರೀಮತಿ ಸೌಮ್ಯಲತಾ ನವೀನ್** ಅವರು ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಡಾ। ಮಂಜುನಾಥ್ ಕೌಂಟೆ ಮಾರ್ಗದರ್ಶನದಲ್ಲಿ ಮಂಡಿಸಿದ ಪ್ರಬಂಧಕ್ಕೆ ರೇವಾ ವಿಶ್ವವಿದ್ಯಾಲಯ, ಬೆಂಗಳೂರು PhD ಪದವಿಯನ್ನು ಪ್ರದಾನ ಮಾಡಿರುತ್ತದೆ. ಇವರು ಬೆಂಗಳೂರಿನಲ್ಲಿರುವ ಶ್ರೀ ನವೀನರವರ ಪತ್ನಿ ಮತ್ತು ಉಪ್ಪುಂದ ಶ್ರೀ ಮನೋಹರ ರಾವ್ ಮತ್ತು ಶ್ರೀಮತಿ ಗಾಯತ್ರಿಯವರ ಸೊಸೆ ಹಾಗೂ ಅಳದಂಗಡಿ ಹೊಸಪಟ್ಣ ಶ್ರೀ ಹೆಚ್. ಎಲ್. ರಾವ್ ಮತ್ತು ಶ್ರೀಮತಿ ಕುಸುಮ ಇವರ ಪುತ್ರಿ.



ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅತ್ಯಮೂಲ್ಯ ಸೇವೆಯನ್ನು ಗುರುತಿಸಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು **ಶ್ರೀಮತಿ ವನಿತಾ ಕುಮಾರಿ** ಇವರ ಸಾಧನೆ ಗುರುತಿಸಿ 'ಅಮೃತ ಸಮ್ಮಾನ' ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.



ಬಿ.ಎಂ.ಎಂ. ಪ್ರೌಢಶಾಲೆ, ಕೂರಾಡಿಯ ಮುಖ್ಯೋಪಾಧ್ಯಾಯರು, ನಮ್ಮ ಸಮಾಜ ಬಾಂಧವರಾದ **ಶ್ರೀ ಎಸ್. ಮೂರ್ತಿ ರಾವ್ ಸಾಸ್ತಾವು** ಇವರು ಪ್ರಸ್ತುತ ಸಾಲಿನ ಉಡುಪಿ ಆದರ್ಶ ಆಸ್ಪತ್ರೆಯವರು ಕೊಡಮಾಡುವ ಪ್ರತಿಷ್ಠಿತ 'ಆದರ್ಶ ಶಿಕ್ಷಕ ಪ್ರಶಸ್ತಿ'ಗೆ ಆಯ್ಕೆಯಾಗಿರುತ್ತಾರೆ. ಶ್ರೇಷ್ಠ ವಿಜ್ಞಾನ ಶಿಕ್ಷಕ, ಏರು ಧ್ವನಿಯಲ್ಲಿ ಅರ್ಥವತ್ತಾಗಿ ವಿದ್ಯಾರ್ಥಿಗಳಿಗೆ ಕಠಿಣ ವಿಷಯವನ್ನು ಸರಳವಾಗಿ ಬೋಧಿಸುವ ಶೈಲಿ ಅವರಿಗೆ ಕರಗತವಾಗಿದೆ. ಅದೆಷ್ಟೋ ವಿದ್ಯಾರ್ಥಿಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಉದ್ದೀಪನಗೊಳಿಸಿ ಉನ್ನತ ಶಿಕ್ಷಣದಲ್ಲಿ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಪ್ರೇರಣಾ ಶಕ್ತಿಯಾಗಿರುತ್ತೀರಿ. ಉತ್ತಮ Classroom Teacher ಆಗಿ ಯಾವುದೇ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಜಾಯಮಾನದ ವ್ಯಕ್ತಿಯಾಗಿರದೆ ಸರಳತೆ ರೂಢಿಸಿಕೊಂಡ ಸಜ್ಜನ ಶಿಕ್ಷಕ. ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯೋಪಾಧ್ಯಾಯ (ಮೂರ್ತಿ ಮಾಸ್ಟ್ರು)ರು ಆದರ್ಶ ಶಿಕ್ಷಕ ಪ್ರಶಸ್ತಿ ಪುರಸ್ಕೃತ ರಾಗಿರುವುದು ನಮಗೆ ಹೆಮ್ಮೆ. ಅಭಿನಂದನೆಗಳು.

# ಜೀವನರಂಗಕ್ಕೆ ವಿದಾಯ ಹೇಳಿದ ಕಲೆಯ ಬೊಕ್ಕಸ ಜಗನ್ನಾಥ ರಾವ್



ಯಕ್ಷಗಾನದ ಹಿರಿಯ ನೇಪಥ್ಯ ಕಲಾವಿದ, ಮೂಡುಬಿದಿರೆ ನಾಗರಕಟ್ಟೆ ನಿವಾಸಿ **ಬೊಕ್ಕಸ ಜಗನ್ನಾಥ ರಾವ್** (76) ಮಂಗಳೂರಿನಲ್ಲಿ ದಿನಾಂಕ 26–08–2023ರ ಶನಿವಾರ ನಿಧನ ಹೊಂದಿದರು. ಪತ್ನಿ, ಸಹೋದರರು ಹಾಗೂ ಬಂಧು–ಬಳಗವನ್ನವರು ಅಗಲಿದ್ದಾರೆ.

ತಂದೆ ರಾಮರಾಯರೊಂದಿಗೆ ವೇಷಭೂಷಣ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ಅವರು ಯಕ್ಷಗಾನ ರಂಗದಲ್ಲಿ 6 ದಶಕಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿದ್ದರು. ಸಂತೋಷ್ ಕಲಾ ಆರ್ಟ್ಸ್ ಎಂಬ ವೇಷಭೂಷಣ ಸಂಸ್ಥೆಯನ್ನು ಅವರು ಕಲಾವಿದ ಲಾಡಿ ಕೃಷ್ಣ ಶೆಟ್ಟಿ, ತನ್ನ ಸಹೋದರರು, ಸಹೋದರರ ಮಕ್ಕಳು ಮತ್ತು ಇತರರ ಸಹಕಾರದೊಂದಿಗೆ ನಡೆಸಿಕೊಂಡು ಬಂದಿದ್ದರು. ಯಕ್ಷಗಾನ, ನಾಟಕಗಳ ವೇಷಭೂಷಣ ಅಲ್ಲದೆ ಬೇತಾಳ, ಮದುವೆ ಮಂಟಪ, ಚಪ್ಪರ ಸಿಂಗಾರ ಕಲೆಯಲ್ಲೂ ಅವರು ನಿಷ್ಣಾತರಾಗಿದ್ದರು.

ಕುರಿಯ ವಿಠಲ ಶಾಸ್ತ್ರಿಯವರ ಸಂಸರ್ಗದಿಂದ ಧರ್ಮಸ್ಥಳ ಮೇಳಕ್ಕೆ ಅವರು ಪ್ರಥಮವಾಗಿ ವೇಷಭೂಷಣ ತಯಾರಿಸಿಕೊಟ್ಟಿದ್ದರು. ವೇಷಗಳನ್ನು ಸಿದ್ಧಪಡಿಸುವ, ಮಣಿಸರಕಿನ ಭೂಷಣಾದಿ ತಯಾರಿಸುವ ಕಲೆಯಲ್ಲಿ ಅವರದು ಎತ್ತಿದ ಕೈ.

ಕುಂಬ್ಳೆ ಸುಂದರರಾಯರ ಚೌತಿಯ ತಿರುಗಾಟದಲ್ಲಿ ಅವರು ಹಲವು ವರ್ಷ ನೇಪಥ್ಯ ಕಲಾವಿದರಾಗಿದ್ದರು. ಶೇಣಿ, ಎಂಪೆಕಟ್ಟೆ, ಪುತ್ತೂರು ನಾರಾಯಣ ಹೆಗ್ಡೆ ಸಹಿತ ಹಿರಿ–ಕಿರಿಯ ಕಲಾವಿದರೆಲ್ಲರ ಒಡನಾಟ ಅವರಿಗಿತ್ತು. ಎಲ್ಲ ಪ್ರಸಂಗಗಳ ಸಂಪೂರ್ಣ ಮಾಹಿತಿ ಅವರಿಗಿತ್ತು. ಒಂದೊಮ್ಮೆ ಶ್ರೀದೇವೀ ಮಹಾತ್ಮೆಯ ಎಲ್ಲ ವೇಷಗಳನ್ನು ಒಬ್ಬರೇ ಕಟ್ಟಿಕೊಟ್ಟ ಚ್ಯಾಲೆಂಜಿಂಗ್ ನೇಪಥ್ಯ ಕಲಾವಿದರು ಅವರು.

ಕಳೆದ ವರ್ಷ ಆಗಸ್ಟ್ 27ರಂದು ಮಂಗಳೂರು ಪುರಭವನದಲ್ಲಿ ನಡೆದಿದ್ದ ಭ್ರಾಮರೀ ಯಕ್ಷಮಿತ್ರರು (ರಿ.), ಮಂಗಳೂರು ಇವರ 5ನೇ ವಾರ್ಷಿಕೋತ್ಸವದಲ್ಲಿ ಅವರು ಸಮ್ಮಾನ ಸ್ವೀಕರಿಸಿದ್ದರು. ಅದಕ್ಕೂ ಮುನ್ನ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಉಡುಪಿಯ ಯಕ್ಷಗಾನ ಕಲಾರಂಗ, ಇರುವೈಲು ಮೇಳ ಸಹಿತ ಹಲವೆಡೆ ಅವರು ಸಮ್ಮಾನಿಸಲ್ಪಟ್ಟಿದ್ದರು.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489



SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*



ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಚ್ಚೋಡ

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

*Manish Rao U.*
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services




1st Floor, Bharath Building, P. M. Rao Road, Hampankatta, Mangaluru - 575 001

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ




ಸೆಟ್ಟಿಬೆಟ್ಟು ಕೆ. ಗುಂಡೂರಾವ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಕಾವೇರಮ್ಮ ಸ್ಮರಣಾರ್ಥ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ದಿ। ಕೆ. ಗುಂಡೂರಾವ್‌ರವರ ಪುಣ್ಯತಿಥಿಯಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **9,00,000/-** (ಒಂಬತ್ತು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಮಕ್ಕಳು, ಮೊಮ್ಮಕ್ಕಳು, ಬಂಧು-ಬಾಂಧವರು, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.




ಎಂ. ಶಂಕರನಾರಾಯಣ ರಾವ್ ಮತ್ತು ಕಾವೇರಮ್ಮ ಸ್ಮರಣಾರ್ಥ ಅವರ ಪುತ್ರ ಶ್ರೀ ಎಂ. ಎಸ್. ರಘುನಾಥ ರಾವ್ ಮತ್ತು ಶ್ರೀಮತಿ ಶ್ಯಾಮಲಾ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **5,00,000/-** (ರೂಪ್ಯಾ ಐದು ಲಕ್ಷ) ದೇಣಿಗೆಯನ್ನು ತಾರೀಕು **27-08-2023**ನೇ ರವಿವಾರ 'ಶಿವಸದನ' ವಿಶೇಷ ಚೇತನ ಆಶ್ರಯಧಾಮದ ಲೋಕಾರ್ಪಣೆಯಂದು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಗಣ್ಯರು ಅವರನ್ನು ಗೌರವಿಸಿದರು.





ಕೃಷ್ಣಮೂರ್ತಿ ರಾವ್, ಕುಕ್ಕೆಹಳ್ಳಿ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಕಲ್ಯಾಣಿ ಕೆ. ರಾವ್, ಪುತ್ರ ಶ್ರೀ ಶ್ರೀಪತಿ ರಾವ್ ಮತ್ತು ಸೊಸೆ ಶ್ರೀಮತಿ ಹರಿಣಿ ಎಸ್. ರಾವ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **5,00,000/-** (ರೂಪ್ಯಾ ಐದು ಲಕ್ಷ) ದೇಣಿಗೆಯನ್ನು ತಾ. **27-08-2023**ನೇ ರವಿವಾರ 'ಶಿವಸದನ' ವಿಶೇಷ ಚೇತನ ಆಶ್ರಯಧಾಮದ ಲೋಕಾರ್ಪಣೆಯಂದು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಗಣ್ಯರು ಅವರನ್ನು ಗೌರವಿಸಿದರು.



ನಂದಾವರ ರಮೇಶ್ ರಾವ್ ಮತ್ತು ಸಹೋದರರು ನಂದಾವರ ಕೌಳಿಗೆ ಶ್ರೀ ಮಂಜುನಾಥಯ್ಯ, ನಂದಾವರ ಪಾರಂಕಿ ಶ್ರೀಮತಿ ಹೆಚ್ಚಮ್ಮ, ಪಾರಂಕಿ ಶ್ರೀಮತಿ ಮಹಾಲಕ್ಷ್ಮೀ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,05,000/-** (ಒಂದು ಲಕ್ಷದ ಐದು ಸಾವಿರ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ನಂದಾವರ ಶಂಕರನಾರಾಯಣ ರಾವ್, ಶ್ರೀಮತಿ ವಾರಿಜಾ ರಾವ್, ಶ್ರೀ ಅಭೀಶ್ ರಾವ್, ಶ್ರೀ ಸುಬ್ರಹ್ಮಣ್ಯ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.

ಅಲೆವೂರು ಶ್ರೀ ಬಾಬು ರಾವ್ ಮತ್ತು ಶ್ರೀಮತಿ ಚಂದ್ರಮ್ಮ ಸ್ಮರಣಾರ್ಥ ಅವರ ಮಕ್ಕಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅಲೆವೂರು ಶ್ರೀ ಪ್ರಭಾಕರ್ ರಾವ್, ಶ್ರೀಮತಿ ವಿನುತಾ ಪಿ. ರಾವ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.



**ಒಂದು ವಿನಂತಿ :** 'ಶಿವಸದನ' ವಸತಿ ನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 151 ಲಕ್ಷ ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತು ರೂಪದಲ್ಲೂ ದೇಣಿಗೆ ನೀಡಬಹುದು. ವಸತಿ ನಿಲಯದಲ್ಲಿ ಈಗಾಗಲೆ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ. ಹೆಚ್ಚಿನ ಮಾಹಿತಿಗಾಗಿ : ಶ್ರೀ ಕರುಣ್ ರಾವ್ ಬೆಳ್ಳೆ : **7337634359**, ಶ್ರೀ ಪಿ. ಶ್ರೀಕಾಂತ್ ರಾವ್ : **7795116598.**

# ಶ್ರೀ ಸುಬ್ರಹ್ಮಣ್ಯ ಸಭಾ ಪ್ರಾಯೋಜಿತ ಸುಸಜ್ಜಿತ ಹಿರಿಯ ನಾಗರಿಕರ ವಸತಿನಿಲಯ ಮತ್ತು ವಿಶೇಷ ಚೇತನರ ಆಶ್ರಯಧಾಮ 'ಶಿವಸದನ' ಲೋಕಾರ್ಪಣೆ



ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಕರ್ಣಾಟಕ ಬ್ಯಾಂಕ್ ಪ್ರಾಯೋಜಿತ ನೂತನ ಲಿಫ್ಟ್ ಮತ್ತು ವಿಶೇಷ ಚೇತನರ ಆಶ್ರಯಧಾಮ ಉದ್ಘಾಟನೆ ತಾರೀಕು 27-08-2023ನೇ ರವಿವಾರ ಪುತ್ತೂರಿನಲ್ಲಿ ನೆರವೇರಿತು. ಕರ್ಣಾಟಕ ಬ್ಯಾಂಕ್ ಚೇರ್‌ಮೆನ್ ಶ್ರೀ ಪ್ರದೀಪ್ ಕುಮಾರ್ ಪಂಜ ನೂತನ ಲಿಫ್ಟ್ ಉದ್ಘಾಟನೆ ಮಾಡಿದರೆ, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಶೇಖರ್ ರಾವ್ ಫಲಕ ಅನಾವರಣಗೊಳಿಸಿದರು. ಪುತ್ತೂರಿನ ಶಾಸಕರಾದ ಶ್ರೀ ಅಶೋಕ್ ಕುಮಾರ್ ರೈ ವಿಶೇಷ ಚೇತನ ಆಶ್ರಯಧಾಮ ಉದ್ಘಾಟನೆ ಮಾಡಿದರು. ಸಭಾ ಕಾರ್ಯಕ್ರಮದಲ್ಲಿ ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ರಮ ಶ್ಲಾಘನೀಯ ಮತ್ತು ಸುಮಾರು 5 ಕೋಟಿಗಳ ಈ ಯೋಜನೆಗೆ ಇನ್ನಷ್ಟು ಆರ್ಥಿಕ ಸಹಾಯದ ಅಗತ್ಯತೆ ಇದ್ದು, ದಾನಿಗಳು ಮುಂದೆ ಬರಬೇಕಾಗಿದೆ ಎಂದು ಶ್ರೀ ಪ್ರದೀಪ್ ಕುಮಾರ್ ನುಡಿದರು. ಕರ್ಣಾಟಕ ಬ್ಯಾಂಕ್ ಇಂತಹ ಯೋಜನೆಗೆ ಸದಾ ತನ್ನ ಇತಿಮಿತಿಯಲ್ಲಿ ಸಹಕರಿಸುತ್ತಿದ್ದು, ಈ ಯೋಜನೆಯ ದೊಡ್ಡ ಗಾತ್ರದ ಲಿಫ್ಟನ್ನು ರೂ. 30 ಲಕ್ಷವನ್ನು ನೀಡಿ ಪ್ರಾಯೋಜಿಸುತ್ತಿದೆ ಎಂದು ಶ್ರೀ ಶೇಖರ್ ರಾವ್ ತಿಳಿಸಿದರು. ಶಾಸಕರಾದ ಶ್ರೀ ಅಶೋಕ್ ಕುಮಾರ್ ರೈ ಸರಕಾರದ ಅನುದಾನಕ್ಕೆ ಪ್ರಯತ್ನಿಸುವುದಾಗಿ ಆಶ್ವಾಸನೆ ನೀಡಿದರು. ರೂ. 5 ಲಕ್ಷಕ್ಕಿಂತಲೂ ಹೆಚ್ಚು ದೇಣಿಗೆ ನೀಡಿದವರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಕಬಕ ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಲ್ಲೇಗ, ಹಾಲಿ ಅಧ್ಯಕ್ಷೆ ಶ್ರೀಮತಿ ಸುಶೀಲಾ, ಶ್ರೀ ಬೆಳ್ಳೆ ರವೀಂದ್ರನಾಥ ರಾವ್, ಶ್ರೀ ಪಿ. ಸತೀಶ್ ರಾವ್, ಶ್ರೀ ರಘುನಾಥ ರಾವ್, ಶ್ರೀ ಬಿ. ಕೆ. ಧನಂಜಯ ರಾವ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಕೇದಿಗೆ ಹರ್ಷಕುಮಾರ್ ಉಪಸ್ಥಿತರಿದ್ದು, ಶುಭಹಾರೈಸಿದರು. ಮಹಿಳಾ ವೇದಿಕೆಯ ಪದಾಧಿಕಾರಿಗಳಾದ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್ ಪ್ರಾರ್ಥನೆ ಹಾಡಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಸ್ವಾಗತಿಸಿದರೆ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಪ್ರಸ್ತಾವನೆ ಮಾಡಿದರು. ಶ್ರೀ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಧನ್ಯವಾದ ನೀಡಿ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಭಾದ ಜೊತೆಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಯುವವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸಾಯಿಪ್ರಸಾದ್ ವ್ಯವಸ್ಥೆಗಳಲ್ಲಿ, ಶ್ರೀ ರಘುವೀರ್ ಪೆರ್ಡೂರ್ ಕಾರ್ಯಕ್ರಮದ ಛಾಯಾಚಿತ್ರಗಳನ್ನು ತೆಗೆದು ಸಹಕರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಕೀರ್ತಿಶೇಷ ಹರಿಶ್ಚಂದ್ರ ರಾವ್ ಮತ್ತು ಕೀರ್ತಿಶೇಷ ಸಂಜೀವಿನಿ ರಾವ್ ಸ್ಮರಣಾರ್ಥ ಅವರ ಮಗಳು ದಿ। ಸುಕನ್ಯಾ ಮತ್ತು ಮೊಮ್ಮಗಳು ಶ್ರೀಮತಿ ಭಾರತೀ ರಘುರಾಮ್ ರಾವ್ ಹಾಗೂ ಮಗಳು ದಿ। ಮೃಣಾಲಿನಿ ವಿಜಯ ಕುಮಾರ್ ಮತ್ತು ಮೊಮ್ಮಗಳು ಶ್ರೀಮತಿ ಭಾಗ್ಯಲಕ್ಷ್ಮಿ ಸುರೇಶ್ ರಾವ್, ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ 2,00,000/- (ರೂ. ಎರಡು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ನಂದಾವರ ಶ್ರೀ ಸುರೇಶ್ ರಾವ್, ಶ್ರೀಮತಿ ಭಾಗ್ಯಲಕ್ಷ್ಮಿ, ಶ್ರೀ ಕುಡ್ವಿ ವಿಜಯ ಕುಮಾರ್, ಶ್ರೀ ಕೆ. ಆರ್. ಉಪಾಧ್ಯಾಯ, ಶ್ರೀ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಸಂತೋಷ್ ಕುಮಾರ್, ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.





ಮಂಗಳೂರು ನಿವಾಸಿ MCF ನಿವೃತ್ತ GM ಶ್ರೀ ಸೋಮಶೇಖರ್ ಎಸ್. ಮತ್ತು ಶ್ರೀಮತಿ ಅರುಣಾ ಸೋಮಶೇಖರ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ 1,00,000/- (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆಯಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.



ಮಂಗಳೂರು ದತ್ತನಗರ ನಿವಾಸಿ ಶ್ರೀ ಟಿ. ಉದಯ ಕುಮಾರ್ ತಮ್ಮ ಮಾತಾಪಿತರಾದ ಟಿ. ವೆಂಕಟರಮಣಯ್ಯ ಮತ್ತು ರಾಧಾ ಅಡೂರ್ ಸ್ಮರಣಾರ್ಥ ತಮ್ಮ ಧರ್ಮಪತ್ನಿ ಶ್ರೀಮತಿ ಸಂಧ್ಯಾ ಉದಯ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ 1,00,000/- (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಪುತ್ರಿ ಕು। ತನುಶ್ರೀ, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀ ಶ್ರೀನಿವಾಸ್ ರಾವ್, ಯುವ ವೇದಿಕೆ ಕಾರ್ಯದರ್ಶಿ ಶ್ರೀ ಸಾಯಿಪ್ರಸಾದ್ ಉಪಸ್ಥಿತರಿದ್ದರು.

# ಗ್ರಾಮದ ಹರಿಕಾರರು



ನಮ್ಮ ಸಮಾಜದ ಶ್ರೀ **ಗುರುರಾಜ್ ರಾವ್** ಇವರು ಆರೂರು ಪಂಚಾಯತ್‌ನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.

**ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ**
**ಮತ್ತು ನಿರ್ದೇಶಕರು,** ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ



ನಮ್ಮ ಸಮಾಜದ ಶ್ರೀ **ರವಿರಾಜ ರಾವ್ ಎಲ್ಲೂರು** ಇವರು ಎಲ್ಲೂರು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಆಯ್ಕೆ ಯಾಗಿರುತ್ತಾರೆ. ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.



**ಶ್ರೀ ಲಕ್ಷ್ಮೀನಾರಾಯಣ ಶರ್ಮ ಅತಿಕಾರಬೈಲು** ಇವರು ಕಾವಳಪಡೂರು ಪಂಚಾಯತ್‌ನ ಅಧ್ಯಕ್ಷರಾಗಿ ಬಹುಮತದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.



ಶ್ರೀ ಬಿಂಧುಮಾಧವ ಸ್ಥಾನಿಕ ಶಿವಬ್ರಾಹ್ಮಣ ಸಂಘ, ಕಳಸ ತಾಲೂಕು, ಚಿಕ್ಕಮಗಳೂರು ಜಿಲ್ಲೆ ನಮ್ಮ ಸಂಘದ ಖಜಾಂಚಿಗಳಾಗಿರುವ **ಶ್ರೀಯುತ ರಂಗನಾಥ್ ಕೆ. ಎ.** ಇವರು ಕಳಸ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.


**'ದಾರಿ ಗೊತ್ತಿರುವವನು ದಾರಿಯಲ್ಲೇ ನಡೆಯುವವನು ಮತ್ತು ದಾರಿ ತೋರಿಸುವವನೇ ನಿಜವಾದ ನಾಯಕ'.**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಕೇದಿಗೆ ಕುಟುಂಬದ ಶ್ರೀ **ವಿಠಲ ರಾವ್** (80 ವರ್ಷ) ತಾರೀಕು 30–08–2023ನೇ ಬುಧವಾರ ಮಂಗಳೂರಿನಲ್ಲಿ ಶಿವೈಕ್ಯರಾಗಿದ್ದಾರೆ. ಅವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



**ಶ್ರೀ ಶಾಂತಾರಾಮ ಗೋಪಾಲಕೃಷ್ಣ ಶಾನ್‌ಭೋಗ್** (93) ನಿವೃತ್ತ ಮುಖ್ಯೋಪಾಧ್ಯಾಯರು ದಿನಾಂಕ 10–08–2023ರಂದು ಧಾರೇಶ್ವರದಲ್ಲಿ ನಿಧನ ಹೊಂದಿದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಸುಳ್ಕೇರಿ ಹಟ್ರಂಜ ಶ್ರೀ ಸುಬ್ರಾಯ ಭಟ್ ಇವರ ಪತ್ನಿ **ಶ್ರೀಮತಿ ಚಂದ್ರಾವತಿ**ಯವರು ದಿನಾಂಕ 19–08–2023ನೇ ಶನಿವಾರದಂದು ನಿಧನ ಹೊಂದಿದರು.

●●●



ಕಬ್ಬಿನಾಲೆ ಮುದ್ರಾಡಿ **ಶ್ರೀಯುತ ಗೋವಿಂದ ರಾವ್** (85) ಇವರು ತಾರೀಕು 19–08–2023ನೇ ಶನಿವಾರ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●



ತೆಂಕಿಲ ಕುಟುಂಬ ಶ್ರೀ **ಅಳಕೆ ಕಿಶೋರ್ ಕುಮಾರ್** (50 ವರ್ಷ) ಸಿವಿಲ್ ಇಂಜಿನಿಯರ್, ಕೀರ್ತಿಶೇಷ ಅಳಕೆ ನಾರಾಯಣ ರಾವ್ ಮತ್ತು ಯಶೋದಾ ದಂಪತಿಗಳ ದ್ವಿತೀಯ ಪುತ್ರರಾದ ಇವರು ತಾ. 27–08–2023ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ತಾಯಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ.



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ ಮಾಜಿ ಅಧ್ಯಕ್ಷರಾದ **ಶ್ರೀ ಪಿ. ವಿದ್ಯಾಪತಿ ರಾವ್** ಓಡತಡ್ಕ ಅಲ್ಲಿಪಾದೆ ಇವರು ತಾ. 26–08–2023ರಂದು ಶಿವೈಕ್ಯ ರಾಗಿರುತ್ತಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿರುತ್ತಾರೆ.

●●●



**ಶ್ರೀ ಪದ್ಮನಾಭ ರಾವ್, ಪೆರ್ಡೂರು** (70) ತಾ. 23–08–2023ನೇ ಬುಧವಾರ (ರಿಟೈರ್ಡ್ ಮ್ಯಾನೇಜರ್, ಕೆನರಾ ಬ್ಯಾಂಕ್) ದಿ। ದಾಸಪ್ಪಯ್ಯ ಮತ್ತು ದಿ। ಗಿರಿಜಾ ಅವರ ಸುಪುತ್ರ. ಇವರು ಪತ್ನಿ, ಮಗ, ಮಗಳು, ಅಳಿಯ, ಸೊಸೆ, 3 ತಮ್ಮಂದಿರು, ಇಬ್ಬರು ತಂಗಿಯರನ್ನು ಅಗಲಿದ್ದಾರೆ.

●●●




ಉಡುಪಿಯ ದಿ। ಕೆ. ಹರಿದಾಸ ರಾಯರ ಪತ್ನಿ **ಸುಲೋಚನಾ ರಾವ್** (89 ವರ್ಷ) ಇವರು ದಿನಾಂಕ 26–08–2023ನೇ ಶನಿವಾರ ನಿಧನರಾದರು. ಅವರು ಇಬ್ಬರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●



ಶಾರ ಶ್ರೀ ಗಣೇಶ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಗೋಪಿ ಯು. ಕೆ.** (58) ತಾರೀಕು 18–08–2023ರ ಶುಕ್ರವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಪತಿ ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

●●●



ಚಾರ ಚಂದ್ರಶೇಖರ ರಾವ್ (70) ತಾರೀಕು 21–8–2023ರ ಸೋಮವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಕಿಗ್ಗ ಋಷ್ಯಶೃಂಗ ದೇವಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–



**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

## 'ಸೋಣ ಸಂಭ್ರಮ ಕಾರ್ಯಕ್ರಮ'
## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ



ಪಡುಬಿದ್ರಿ ಮಹಿಳಾ ವೇದಿಕೆ ವತಿಯಿಂದ ಸೋಣ ಸಂಭ್ರಮ ಕಾರ್ಯಕ್ರಮವು ದಿನಾಂಕ 10-09-2023ನೇ ಆದಿತ್ಯವಾರ ಶ್ರೀ ಬಾಲಗಣಪತಿ ದೇವಸ್ಥಾನದ ವಠಾರದಲ್ಲಿ ಜರುಗಿತು. ಸೋಣ ತಿಂಗಳು ಹಬ್ಬದ ತಿಂಗಳಾಗಿದ್ದು ಹೆಚ್ಚಿನ ಹಬ್ಬಗಳೆಲ್ಲ ಸೋಣ ತಿಂಗಳಲ್ಲಿ ಬರುತ್ತದೆ. ನಮ್ಮ ಮನಸ್ಸು ಉಲ್ಲಾಸದಾಯಕವಾಗಿರುವುದರಿಂದ ಒಳ್ಳೆಯ ತಿಂಡಿ ತಿನಿಸುಗಳನ್ನು ಸ್ವೀಕರಿಸಬೇಕು ಎಂಬ ಉದ್ದೇಶದಿಂದ ಮಹಿಳಾ ವೇದಿಕೆಯ ವತಿಯಿಂದ ತಿಂಡಿ ತಿನಿಸುಗಳನ್ನು ಏರ್ಪಡಿಸಲಾಗಿದೆ ಎಂದು ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್‌ರವರು ಸೋಣ ಸಂಭ್ರಮದ ವೇದಿಕೆಯಲ್ಲಿ ದಿಕ್ಸೂಚಿ ಮಾತಿನಲ್ಲಿ ತಿಳಿಸಿದರು. ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಇನ್ನ, ಸಂಚಾಲಕರು ಶ್ರೀಮತಿ ಸಾವಿತ್ರಿ ಅರವಿಂದ ರಾವ್, ಯುವವೇದಿಕೆ ಅಧ್ಯಕ್ಷರಾದ ಶ್ರೀ ಎಸ್. ಜನಾರ್ದನ್ ರಾವ್ ಹಾಗೂ 'ಝೀ ಕನ್ನಡ'ದಲ್ಲಿ ಸ.ರಿ.ಗ.ಮ.ಪ. ಲಿಟಲ್ ಚಾಂಪ್ಸ್‌ನಲ್ಲಿ ಎರಡನೇ ವಿಜೇತೆ ಕುಮಾರಿ ತನುಶ್ರೀ ಮಂಗಳೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನಮ್ಮ ಸಂಘದ ವ್ಯಾಪ್ತಿಯ ಹಿರಿಯ ಗೃಹಣಿಯರಾದ ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್ ಬೆಳ್ಮಣ್ಣು, ಶ್ರೀಮತಿ ಭಾಗೀರಥಿ ಕುಮಾರಸ್ವಾಮಿ ಪಡುಬಿದ್ರಿ, ಶ್ರೀಮತಿ ಸುನೀತಾ ಶೇಖರ್ ರಾವ್ ಪಡುಬಿದ್ರಿ, ಶ್ರೀಮತಿ ವಿದ್ಯಾವತಿ ಭವಾನಿಶಂಕರ್ ರಾವ್ ಫಲಿಮಾರು ಇವರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು. ಬಳಿಕ ಕುಮಾರಿ ತನುಶ್ರೀ ಮಂಗಳೂರು ಇವರಿಗೆ ಸಂಘದ ವತಿಯಿಂದ ಸನ್ಮಾನಿಸಲಾಯಿತು ಹಾಗೂ ಶ್ರೀ ಲಕ್ಷ್ಮಿಗೋಪಾಲಕೃಷ್ಣ ಟ್ರಸ್ಟ್ ವತಿಯಿಂದ ರೂ. 10,000–00 ನಿರಖು ಠೇವಣಿ ಪತ್ರವನ್ನು ನೀಡಿ ಗೌರವಾರ್ಪಣೆ ಸಲ್ಲಿಸಲಾಯಿತು. ಮಾ। ಅಖಿಲೇಶ್ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಪ್ರೀತ ರವಿ ರಾವ್ ಪ್ರಾರ್ಥಿಸಿ, ಶ್ರೀಮತಿ ಧರ್ಮಪ್ರಭ ವಿದ್ಯಾರಣ್ಯ ರಾವ್ ಸ್ವಾಗತಿಸಿದರು. ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಪ್ರಸ್ತಾವನೆ ಮಾತನಾಡಿ, ಶ್ರೀಮತಿ ವೇದಾವತಿ ಡಿ. ರಾವ್, ಶ್ರೀಮತಿ ಸೌಮ್ಯ ಶಂಕರ್ ರಾವ್, ಶ್ರೀಮತಿ ರೂಪ ಸುರೇಶ್ ರಾವ್, ಶ್ರೀಮತಿ ರೇಣುಕಾ ಎ. ರಾವ್ ಹಾಗೂ ಶ್ರೀಮತಿ ರಮ್ಯಾ ಅರುಣ್ ರಾವ್ ಸನ್ಮಾನಪತ್ರ ವಾಚಿಸಿದರು. ಶ್ರೀಮತಿ ಮಂಜುಶ್ರೀ ಅನಂತರಾಮ ರಾವ್ ವಂದಿಸಿ, ಶ್ರೀಮತಿ ಪವಿತ್ರ ಕೃಷ್ಣರಾವ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಕುಮಾರಿ ತನುಶ್ರೀ ಇವರಿಂದ ಸುಮಧುರ ಹಾಡುಗಳು ಹಾಗೂ ಮಕ್ಕಳ ನೃತ್ಯ ಮತ್ತು ಮಹಿಳಾ ವೇದಿಕೆಯಿಂದ ತಯಾರಿಸಲ್ಪಟ್ಟ ರುಚಿಕರವಾದ ಖಾದ್ಯಗಳು ಮನಸೂರೆಗೊಂಡವು. ಕಾರ್ಯಕ್ರಮದಲ್ಲಿ ಆಹ್ವಾನಿತ ಎಲ್ಲಾ ಸಂಘದ ಅಧ್ಯಕ್ಷರುಗಳು, ಪದಾಧಿಕಾರಿಗಳು, ಸದಸ್ಯರು, ವಿವಿಧ ಗಣ್ಯರು ಸಂಘದ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಸ್ಥಾನಿಕ ಬ್ರಾಹ್ಮಣ ಸಭಾ ಹಾಗೂ ಯುವ ವೇದಿಕೆ ಕಾರ್ಯಕ್ರಮಕ್ಕೆ ಸಹಕರಿಸಿದರು.

## ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ದಂಪತಿಗಳಿಗೆ ಸನ್ಮಾನ



ಶ್ರೀ ಸುಬ್ರಹ್ಮಣ್ಯ ಸಭಾದ 'ಅಷ್ಟಮಿ ಆಚರಣೆ' ಕಾರ್ಯಕ್ರಮದಲ್ಲಿ ಶ್ರೀ ಇನ್ನ ಶ್ರೀನಿವಾಸ ರಾವ್ ಮತ್ತು ಶ್ರೀ ಸಭಾ ಮಹಿಳಾ ವೇದಿಕೆ ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ದಂಪತಿಗಳನ್ನು ಸನ್ಮಾನಿಸಲಾಯಿತು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಡಾ। ಜಯಲಕ್ಷ್ಮೀ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಉಪಾಧ್ಯಕ್ಷೆ ಶ್ರೀಮತಿ ಸ್ನೇಹಲತಾ ದಿವಾಕರ್, ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ ಸನ್ಮಾನಿಸಿದರು.

## ಶ್ರೀ ಸಭಾ 'ಅಷ್ಟಮಿ ಆಚರಣೆ' ಸ್ಪರ್ಧಾ ವಿಜೇತರು

**ಭಗವದ್ಗೀತೆ ಪಠಣ ಸ್ಪರ್ಧೆ :**

10 ವರ್ಷದ ಒಳಗಿನ ವಿಭಾಗ :

I : **ದೇವಾಂಶು ಎ. ರಾವ್**, II : **ಸಮೃದ್ಧಿ ಶಾನುಭೋಗ್**, III : **ಆನ್ವಿ ಪಿ. ಆರ್.**

10–18 ವರ್ಷ : I : **ಆಕಾಂಕ್ಷ**, II : **ವೈಷ್ಣವಿ ರಾವ್**, III : **ಅಧಿತಿ ರಾವ್.**

18 ವರ್ಷ ಮೇಲಿನ ವಿಭಾಗ :

I : **ವೈಭವಲಕ್ಷ್ಮೀ**, II : **ಸೌಮ್ಯ**, III : **ಹರಿಣಾ ಕುಮಾರಿ**

**ಮುದ್ದುಕೃಷ್ಣ ವೇಷ ಸ್ಪರ್ಧೆ :**

3 ವರ್ಷ ಕೆಳಗಿನ ವಿಭಾಗ : I : **ಘನಿಷ್ಕಾ ಜಿ. ಆರ್.**, II : **ಆದ್ಯಂತ**, III : **ಸಾನ್ವಿ**

3ರಿಂದ 8 ವರ್ಷ :

I : **ಆದ್ಯ ಅದ್ಯಪಾಡಿ**, II : **ಧನ್ವಿತಾ ಶಾನುಭೋಗ್** ಮತ್ತು **ಸಮೃದ್ಧಿ**, III : **ವೃಶಾಂಕ್**

8ರಿಂದ 12 ವರ್ಷ : **ಅಂಕಿತಾ ಅದ್ಯಪಾಡಿ**

**ಭಕ್ತಿಗೀತೆ ಸ್ಪರ್ಧೆ :**

12ರಿಂದ 30 ವರ್ಷದ ವಿಭಾಗ

I : **ಯಶಸ್ ಎ. ರಾವ್.**, II : **ಅಂಕಿತಾ ಶ್ರೀ ಅದ್ಯಪಾಡಿ**, III : **ಅದ್ವಿತಿ ರಾವ್**

30 ವರ್ಷ ಮೇಲ್ಪಟ್ಟು :

I : **ಶ್ರೀಮತಿ ಸುಜಾತ**, II : **ಶ್ರೀಮತಿ ಎಂ. ಭಾಗ್ಯಲಕ್ಷ್ಮೀ**, III : **ಶ್ರೀ ಶ್ರೀನಿವಾಸ್ ರಾವ್**

**ಮಡಕೆ ಒಡೆಯುವ ಸ್ಪರ್ಧೆ :**

16 ವರ್ಷ ಕೆಳಗಿನ ವಿಭಾಗ : **ದೇವಾಂಶ್ ರಾವ್**

16 ವರ್ಷ ಮೇಲ್ಪಟ್ಟು : **ಶ್ರೀಮತಿ ಶಶಿಕಲಾ ಶ್ರೀಹರಿ**

**ಶಂಖ ಊದುವ ಸ್ಪರ್ಧೆ :**

I : **ಶ್ರೀಮತಿ ಜೀವಿತಾ**, II : **ಶ್ರೀಮತಿ ರೇಖಾ ಪಿ. ರಾವ್**, III : **ಶ್ರೀ ಶ್ರೀಹರಿ ಅದ್ಯಪಾಡಿ**

**ಚಕ್ಕುಲಿ ಊಹನೆ ಸ್ಪರ್ಧೆ : ಶ್ರೀಮತಿ ಶ್ರೀಲತಾ ಭಟ್.**

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002


PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

M.Devanand bhat
Mob: 9845644556
9663993883

Shobha Digital
STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

# ಶ್ರೀ ಶಂಕರ ಪ್ರತಿಷ್ಠಾನ (ರಿ.), ಕಾರ್ಕಳ - ವಾರ್ಷಿಕೋತ್ಸವ

ಸ್ಥಾನಿಕ ಬ್ರಾಹ್ಮಣ ಸಂಘ ಇದರ 39ನೇ ವಾರ್ಷಿಕೋತ್ಸವ ತಾ. 30–07–2023ನೇ ರವಿವಾರ ಶ್ರೀ ರಾಧಾಕೃಷ್ಣ ಸಭಾಭವನದಲ್ಲಿ ಜರುಗಿತು. ಮಹಿಳಾ ವಿಭಾಗದ ಸದಸ್ಯರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ದೀಪ ಬೆಳಗುವುದರ ಮೂಲಕ ಉದ್ಘಾಟನೆಗೊಂಡಿತು. ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಕೇಶವ ರಾವ್, ಗೌರವಾಧ್ಯಕ್ಷರಾದ ಶ್ರೀ ಮುರಳೀಧರ ಶರ್ಮಾ, ಉಪಾಧ್ಯಕ್ಷರಾದ ಶ್ರೀ ರಾಜಶೇಖರ್ ರಾವ್, ಕಾರ್ಯದರ್ಶಿ ಶ್ರೀ ಸತೀಶ್ ರಾವ್ ಕರ್ವಾಲ್, ಕೋಶಾಧಿಕಾರಿ ಶ್ರೀ ಕೋದಂಡರಾಮ, ಮಹಿಳಾ ಅಧ್ಯಕ್ಷೆ ಶ್ರೀಮತಿ ವಿದ್ಯಾವತಿ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಮಲ್ಲಿಕಾ ಎಸ್. ಹೆಬ್ಬಾರ್, ಮುಖ್ಯ ಅತಿಥಿಗಳಾಗಿ ಶ್ರೀ ನಕ್ರೆ ಬಾಲಕೃಷ್ಣ ರಾವ್, ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ವಿದ್ಯಾನಿಧಿ ಮತ್ತು ವಾರ್ಷಿಕೋತ್ಸವ ನಿಧಿ ಸಂಚಾಲಕರಾದ ಶ್ರೀ ಮನೋಹರ್ ರಾವ್, ಶ್ರೀ ವಿಜಯ ಕುಮಾರ್ ಪರಪ್ಪು, ಶ್ರೀ ಭವಾನಿಶಂಕರ ರಾವ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ವಿಘ್ನೇಶ್ ಕುಮಾರ್, ಕಾರ್ಯದರ್ಶಿ ಶ್ರೀ ಶಶಾಂಕ್ ರಾವ್ ಉಪಸ್ಥಿತರಿದ್ದರು.

ಶ್ರೀಮತಿ ವಿದ್ಯಾವತಿ ಸ್ವಾಗತಿಸಿ, ಶ್ರೀಮತಿ ಮಲ್ಲಿಕಾ ಹೆಬ್ಬಾರ್ ವಂದಿಸಿದರು. ಶ್ರೀ ಸತೀಶ್ ರಾವ್ ಕರ್ವಾಲು ವರದಿ ವಾಚಿಸಿದರು. ಶ್ರೀ ಕೋದಂಡರಾಮ ರಾವ್ ಲೆಕ್ಕಪತ್ರ ಮಂಡಿಸಲಾಗಿ ಅನುಮೋದಿಸಲಾಯಿತು.

ಅಧ್ಯಕ್ಷರಾದ ಶ್ರೀ ಕೇಶವ ರಾವ್ ಅಧ್ಯಕ್ಷೀಯ ಭಾಷಣದಲ್ಲಿ ಸಂಘದ ಸಂಘಟಿತ ಶಕ್ತಿ ಮತ್ತು ಮುಂದೆ ಆಗಬೇಕಾದ ಕಾರ್ಯದ ಕುರಿತು ವಿವರಿಸಿದರು. ಮುಖ್ಯವಾಗಿ ಸಂಘಕ್ಕೆ ನಿವೇಶನ ಮತ್ತು ಕಟ್ಟಡದ ಅಗತ್ಯದ ಬಗ್ಗೆ ವಿವರಿಸಿದರು. ಹಲವು ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಕಾರ್ಯಕ್ರಮವನ್ನು ಶ್ರೀಮತಿ ಸೌಮ್ಯ ಭವಾನಿಶಂಕರ ನಿರ್ವಹಿಸಿದರು. ಸಂಗೊಳ್ಳಿ ರಾಯಣ್ಣ ಎಂಬ ಕಿರುನಾಟಕವನ್ನು ಸಂಘದ ಸದಸ್ಯರು



ನಡೆಸಿಕೊಟ್ಟರು ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ನಿರ್ದೇಶಿಸಿದರು. ಹಿರಿಯ ದಂಪತಿಗಳನ್ನು ಮತ್ತು ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಯಲ್ಲಿ ಪ್ರಥಮ–ದ್ವಿತೀಯ ಸ್ಥಾನಿಗಳನ್ನು ಸನ್ಮಾನಿಸಲಾಯಿತು ಹಾಗೂ ಉಳಿದ ಮಕ್ಕಳಿಗೆ ನಗದು ಪುರಸ್ಕಾರ ನೀಡಲಾಯಿತು. ಸಂಘದ ಸದಸ್ಯರೆಲ್ಲರಿಗೂ ಆಟೋಟ ಸ್ಪರ್ಧೆ ಏರ್ಪಡಿಸಿದ್ದು ವಿಜೇತರಾದವರಿಗೆ ಬಹುಮಾನವನ್ನು ಇದೇ ಸಂದರ್ಭದಲ್ಲಿ ನೀಡಲಾಯಿತು. ಮಧ್ಯಾಹ್ನ ಸಹಭೋಜನ ಇದ್ದು, ಅದರ ಪ್ರಾಯೋಜಕರಾದ ಶ್ರೀಮತಿ ಮತ್ತು ಶ್ರೀ ರಮೇಶ್ ರಾವ್ ಸಿ. ಕಾಬೆಟ್ಟು ಅವರುಗಳನ್ನು ಹಾಗೂ ಕಾರ್ಯಕ್ರಮಕ್ಕೆ ಸಹಕರಿಸಿದ ಪ್ರಾಯೋಜಕರನ್ನು ಸನ್ಮಾನಿಸಲಾಯಿತು. ಹಿರಿಯ ದಂಪತಿಗಳು ಶ್ರೀ ಐ. ಕೆ. ಕೃತ್ತಿವಾಸ ಶರ್ಮ ಮತ್ತು ಶ್ರೀಮತಿ ಐ. ಕೆ. ಪ್ರಭಾವತಿ ಇವರುಗಳನ್ನು ಸನ್ಮಾನಿಸಲಾಯಿತು. ಶ್ರೀಮತಿ ಸಾವಿತ್ರಿ ಮನೋಹರ್ ಮತ್ತು ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು ಕಾರ್ಯಕ್ರಮ ನಿರ್ವಹಿಸಿದರು ಹಾಗೂ ಹೊಸ ಸಮಿತಿ ಪದಾಧಿಕಾರಿಗಳ ಆಯ್ಕೆಯನ್ನು ಸಮಾಜದ ಹಿರಿಯರಾದ ಶ್ರೀ ರಮೇಶ್ ರಾವ್ ಸಿ. ಕಾಬೆಟ್ಟು ಇವರು ನಡೆಸಿಕೊಟ್ಟರು.

## ನಾಗರಪಂಚಮಿ ಆಚರಣೆ



ಶ್ರೀ ಸುಬ್ರಹ್ಮಣ್ಯ ಸಭಾದ ಪೊಳಲಿ ನಿವೇಶನದಲ್ಲಿನ ನಾಗಬನದಲ್ಲಿ ವೇದಮೂರ್ತಿ ರವಿ ಉಪಾಧ್ಯಾಯರ ಪೌರೋಹಿತ್ಯದಲ್ಲಿ ನಾಗರಪಂಚಮಿ ಆಚರಿಸಲಾಯಿತು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಮೆನೇಜರ್ ಶ್ರೀ ರಾಘವೇಂದ್ರ, ಮತ್ತು ಪರಿಸರದ ಭಕ್ತಾದಿಗಳು ಉಪಸ್ಥಿತರಿದ್ದರು.

Prop. : P. Srikanth Rao    Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4


Celebrating 60th Year
1963-2023
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ ಶ್ರೀ ವರಮಹಾಲಕ್ಷ್ಮೀ ಪೂಜೆ

ದಿನಾಂಕ 25–08–2023ರಂದು ಅಪರಾಹ್ನ ಗಂಟೆ 3–00ರಿಂದ ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಸಭಾಭವನದಲ್ಲಿ 17ನೇ ವರ್ಷದ ಶ್ರೀ ವರಮಹಾಲಕ್ಷ್ಮೀ ಪೂಜೆಯು ನೆರವೇರಿತು. ಸಭಾದ ಮಹಿಳಾ ವೇದಿಕೆಯ ನೇತೃತ್ವದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ 18 ಸುಮಂಗಲಿಯರು ವ್ರತಧಾರಿಗಳಾಗಿ ಒಟ್ಟು 65ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದ್ದರು. ಮಹಿಳಾ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಸ್ವಾತಿ ವಿಶ್ವಜಿತ್ ಹಾಗೂ ಕಾರ್ಯದರ್ಶಿ ಶ್ರೀಮತಿ ಸವಿತಾ ಮನೋಹರ್ ಇವರ ಮುಂದಾಳುತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷ ಶ್ರೀ ಶಿವಾನಂದ ರಾವ್, ಕಾರ್ಯದರ್ಶಿ ಶ್ರೀ ವಿಕಾಸ್ ರಾವ್ ಹಾಗೂ ಸದಸ್ಯರು ಭಾಗವಹಿಸಿದ್ದರು.

## ಲೋಕೋದ್ಧಾರಕನಾದಂತಹ ಭಗವಾನ್ ಶ್ರೀಕೃಷ್ಣ



ಕೃಷ್ಣ ಲೋಕೋತ್ತರ ಸುಂದರನಿದ್ದ. ಜೀವನದುದ್ದಕ್ಕೂ ಸ್ತ್ರೀಯರ ಸಂವೇದನೆಗೆ ಸ್ಪಂದಿಸಿದ ಕೃಷ್ಣನ ಬಾಲ್ಯದ ಒಂದು ಘಟನೆ.


ಸ್ನಾನಕ್ಕೆಂದು ನದಿಗೆ ಇಳಿದಿದ್ದ ಗೋಪ ಬಾಲಕಿಯರ ವಸ್ತ್ರಾಪಹರಣ ಮಾಡಿದ್ದು ಕೃಷ್ಣ ತನ್ನ ಏಳನೇ ವಯಸ್ಸಿನಲ್ಲಿ. ಆ ಬಾಲಕಿಯರು ಮುಂದೆ ಕೃಷ್ಣನೇ ತಮ್ಮ ಪತಿಯಾಗಬೇಕೆಂದು ತಾರ್ತ್ಯಾಯನಿ ವ್ರತ ಮಾಡುತ್ತಿದ್ದರಂತೆ. ಹೆಣ್ಣಿನ ಕಣ್ಣೀರು ಒರೆಸುವುದು ಕೃಷ್ಣಾವತಾರದ ಪರಮೋದ್ದೇಶ. ದ್ರೌಪದಿಯ ಜೀವನದಲ್ಲಂತೂ ಕೃಷ್ಣನ ಪಾತ್ರ ಅನನ್ಯವಾದುದು. ಐವರು ಮಹಾವೀರರ ಮಡದಿಯಾಗಿಯೂ ಆಕೆಯ ರಕ್ಷಣೆಗೆ ಬಂದವರು ಅವಳ ಗಂಡಂದಿರಲ್ಲ. ಶ್ರೀ ಕೃಷ್ಣ ಗೋಪಬಾಲೆಯರ ವಸ್ತ್ರ ಕದ್ದ ಕೃಷ್ಣ. ದ್ರೌಪದಿಯ ಮಾನ ಉಳಿಸಲು ಅಕ್ಷಯಾಂಬರ ನೀಡಿದ ಅಲ್ಲಿ ಕದ್ದದ್ದು ಇಲ್ಲಿ ಸಂದಾಯವಾಯಿತು. ದ್ರೌಪದಿ ತನ್ನ ಮುಡಿ ಬಿಚ್ಚಿದ ಕೇಶರಾಶಿಯನ್ನು ಕೃಷ್ಣನ ಪಾದಗಳ ಮೇಲೆ ಹರವಿ ಕಾಲಿಗೆರಗುತ್ತ ಹೀಗೆ ನುಡಿದಳು. ರಾಜಸೂಯದ ಪವಿತ್ರ ಜಲದಿಂದ ಅಭಿಷಿಕ್ತವಾದ ತನ್ನ ಈ ಕೇಶರಾಶಿಯನ್ನು ದುರುಳ ದುಶ್ಯಾಸನ ಕೈಯಿಕ್ಕಿ ಅಪವಿತ್ರಗೊಳಿಸಿದ್ದಾನೆ. ಈ ಹೆಣ್ಣಿಗೆ ಆದ ಅನ್ಯಾಯದ ವೇದನೆ ಎಂತಹುದು ಎನ್ನುವುದು ತನ್ನ ಗಂಡಂದಿರಿಗೆ ಅರ್ಥವಾಗಿದ್ದರೂ ಅವರು ಅಸಹಾಯಕರಾಗಿದ್ದರು. ಹೀಗೆ ದ್ರೌಪದಿಯು ಕಣ್ಣೀರಿಟ್ಟಾಗ ಒಂದು ಹನಿ ಕೃಷ್ಣನ ಕಾಲಿಗೆ ಬಿತ್ತಂತೆ. ಈ ಕಂಬನಿ ಕೃಷ್ಣನ ನಿರ್ಧಾರವನ್ನು ಬದಲಿಸಿತು. ಅದರ ಪರಿಣಾಮವಾಗಿ ಮಹಾಭಾರತ ಯುದ್ಧ ನಡೆಯಿತು.

ಶ್ರೀಕೃಷ್ಣನಿಂದಲೇ ಕುರುಕ್ಷೇತ್ರದಲ್ಲಿ ಅಂತಿಮವಾಗಿ ಧರ್ಮಕ್ಕೆ ಜಯ ಲಭಿಸಿತು. ಧರ್ಮಕ್ಕೆ ವಿಪ್ಲವ ಉಂಟಾದಾಗ ಧರ್ಮದ ರಕ್ಷಣೆಗೆ ಭಗವಂತ ಅವತಾರ ಎತ್ತಿ ಬರುತ್ತಾನೆ.

**ಭಗವಾನ್ ಶ್ರೀಕೃಷ್ಣ ಜನ್ಮಾಷ್ಟಮಿ ಶುಭದಿನದಂದು ನಮಗೆಲ್ಲರಿಗೂ ಸನ್ಮಂಗಲವನ್ನುಂಟು ಮಾಡಲಿ ಎಂಬ ಹಾರೈಕೆಯೊಂದಿಗೆ – ಶ್ಯಾರ ದಿನೇಶ್ ರಾವ್, ಕುಡಿಪ್ಪಾಡಿ, ಪುತ್ತೂರು**

# 'ಶುಭಾರಂಭ'

## ನಮನ ಸೌಹಾರ್ದ ಸಹಕಾರಿ ಸಂಘ (ನಿ.), ಮೂಡಬಿದ್ರಿ



**ಶ್ರೀ ಚಂದ್ರಶೇಖರ ರಾವ್**
ಬೊಕ್ಕಸ



**ಎಂ. ದೇವಾನಂದ ಭಟ್**
ಬೆಳ್ವಾಯಿ

ಮೂಡಬಿದ್ರಿಯಲ್ಲಿ ನೂತನವಾಗಿ ಆರಂಭಗೊಂಡ 'ನಮನ ಸೌಹಾರ್ದ ಸಹಕಾರಿ ಸಂಘ (ನಿ.) ಇದರ ಅಧ್ಯಕ್ಷರಾಗಿ ಶ್ರೀ ಚಂದ್ರಶೇಖರ ರಾವ್ ಬೊಕ್ಕಸ (ಕರ್ಣಾಟಕ ಬ್ಯಾಂಕ್ ನಿವೃತ ಜಿ. ಎಂ.) ಹಾಗೂ ಉಪಾಧ್ಯಕ್ಷರಾಗಿ ಮುಖ್ಯ ಪ್ರವರ್ತಕ ಬೆಳ್ವಾಯಿ ಎಂ. ದೇವಾನಂದ ಭಟ್ (ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ) ಆಯ್ಕೆಗೊಂಡಿರುತ್ತಾರೆ. ಮೂಡಬಿದ್ರಿಯ ಉದ್ಯಮಿ ಕೆ. ಶ್ರೀಪತಿ ಭಟ್ ಗೌರವ ಸಲಹೆಗಾರರಾಗಿ, ಒಟ್ಟು ಪ್ರತಿಷ್ಠಿತ 13 ಜನ ನಿರ್ದೇಶಕರಲ್ಲಿ ಕಾರ್ಪ್ ಬ್ಯಾಂಕ್ ನಿವೃತ್ತ ಡಿ.ಜಿ.ಎಂ. ವಸಂತ ಭಟ್ ಪಯ್ಯಡೆ, ವಜ್ರದ ಉದ್ಯಮಿ ನಿತ್ಯಾನಂದ ಮಠ, ಆಳ್ವಾಸ್‌ನ ಡಾ। ಸುಬ್ರಹ್ಮಣ್ಯ ಪದ್ಯಾಣ, ವಿದ್ಯಾ ರಮೇಶ್ ಭಟ್ ಪುತ್ತಿಗೆ, ಕೆ. ಎಸ್. ಕೇಶವ ರಾವ್ ಕಾರ್ಕಳ, ಅಲಕಾ ಬಿ., ಸುಬ್ರಹ್ಮಣ್ಯ ಭಟ್ ಏರ್ಪಲೆ, ವಾಸುದೇವ ಉಪಾಧ್ಯ, ವಸಂತ ಭಟ್ ನಾರಾವಿ, ರಾಘವೇಂದ್ರ ಹೆಬ್ಬಾರ್ ಕಬ್ಬಿನಾಲೆ, ರಘುಪತಿ ಭಟ್ ಗುಂಡಿಯಡ್ಕ ಆಯ್ಕೆಯಾಗಿದ್ದಾರೆ.

ಹೊರನಾಡು ಕ್ಷೇತ್ರದ ಧರ್ಮಕರ್ತರಾದ ಶ್ರೀ ಜಿ. ಭೀಮೇಶ್ವರ ಜೋಶಿ ಉದ್ಘಾಟನೆ ನೆರವೇರಿಸಿದ ವೇದಿಕೆಯಲ್ಲಿ ಮೂಡಬಿದಿರೆ ಜೈನ ಮಠದ ಪೂಜ್ಯ ಸ್ವಾಮೀಜಿಯವರು ಇದು ಮುಂದೆ ಮೂಡಬಿದಿರೆಯಲ್ಲಿ ಉತ್ತರೋತ್ತರ ಅಭಿವೃದ್ಧಿ ಹೊಂದಿ ಒಂದು ಮಾದರಿ ಜನೋಪಕಾರಿ ಸಂಸ್ಥೆಯಾಗಿ ಬೆಳೆಯಲಿ, ಬೆಳಗಲಿ ಎಂದು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಗ್ರಾಮ ದೇವಸ್ಥಾನ ಪುತ್ತಿಗೆ ಅರ್ಚಕರು ಶ್ರೀ ಅಡಿಗಳ್ ಶ್ರೀ ಅನಂತಕೃಷ್ಣ ಭಟ್, ಹನುಮಂತ ದೇವಸ್ಥಾನ ಆಡಳಿತ ಮೊಕ್ತೇಸರರು ಶ್ರೀ ಜಿ. ಉಮೇಶ್ ಪೈ, ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರು ಲ। ಎ. ಸುರೇಶ್ ರೈ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಅಧ್ಯಕ್ಷ ಸ್ಥಾನದಿಂದ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಸೌಹಾರ್ದ ಸಹಕಾರಿಗೆ ಶುಭಹಾರೈಸಿದರು.

# ಹಿರಿಯ ಬಾಳಿಗೊಂದು ಬಣ್ಣದ ಚಿತ್ತಾರ



ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯದ ಹೊರ ಆವರಣದಲ್ಲಿ ಒಂದು ಮನಮೋಹಕ ವರ್ಣಚಿತ್ರ ರಚಿಸಲಾಗಿದ್ದು, ಇದನ್ನು ಶ್ರೀ ಇನ್ನ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ದಂಪತಿಗಳು ರೂ. 25,000/- ನೀಡಿ ಪ್ರಾಯೋಜಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್

## 'ಆಟಿದೊ ಆಟ-ಕೂಟ'



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ಇದರ ಮಹಿಳಾ ವೇದಿಕೆಯವರು ನಡೆಸಿಕೊಟ್ಟ 'ಆಟಿದೊ ಆಟ-ಕೂಟ'ವು ದಿನಾಂಕ 30-7-2023ನೇ ರವಿವಾರ ಮಲ್ಲಮಾರು ಶ್ರೀ ಭವಾನಿಶಂಕರ ರಾಯರ ಮನೆಯಲ್ಲಿ ಸಂಭ್ರಮದಿಂದ ನಡೆಯಿತು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಸಂಘದ ಎಲ್ಲಾ ಪದಾಧಿಕಾರಿಗಳನ್ನು ಕಾರ್ಯಕ್ರಮಕ್ಕೆ ಪ್ರೀತಿಯಿಂದ ಆಹ್ವಾನಿಸಿ, ಕುಮಾರಿ ಸಂಜನಾರವರು ಸುಮಧುರವಾಗಿ ಪ್ರಾರ್ಥಿಸಿ, ಗಣ್ಯರೆಲ್ಲರೂ ಸೇರಿ ದೀಪಪ್ರಜ್ವಲನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಚಾಲನೆ ನೀಡಲಾಯಿತು.

ಶ್ರೀಮತಿ ಕ್ಷಮಾ ಹರಿನಾರಾಯಣರವರು ಆಟಿಯ ವಿಶೇಷತೆಯನ್ನು ಮನಮುಟ್ಟುವಂತೆ ತಿಳಿಸಿ, 'ಆಟಿದೊ ರಸಪ್ರಶ್ನೆ' ಕಾರ್ಯಕ್ರಮವನ್ನು ಮನಮೋಹಕವಾಗಿ ನೆರವೇರಿಸಿ ಕೊಟ್ಟರು.


'ಆಟಿದೊ ಆಟ-ಕೂಟ'ವು ಸಂಘದ ಸದಸ್ಯರೆಲ್ಲರ ಮನೋರಂಜನೆಗಾಗಿಯೇ ಆಯೋಜಿಸಲ್ಪಟ್ಟದ್ದರಿಂದ, ಸುಮಾರು 3 ಗಂಟೆಗಳ ಕಾಲ, ವಯೋಮಾನಕ್ಕನುಗುಣವಾಗಿ, ನವನವೀನ ಆಟಗಳು ಶ್ರೀಮತಿ ಸುಧಾ ಫಾಲಚಂದ್ರರವರ ನೇತೃತ್ವದಲ್ಲಿ, ಸಂಘದ ಎಲ್ಲಾ ಸದಸ್ಯರ ಭಾಗವಹಿಸುವಿಕೆಯೊಂದಿಗೆ ನೆರವೇರಿತು.

ತದನಂತರ ನಡೆದ ಸಭಾಕಾರ್ಯಕ್ರಮವು, ಸಂಘದ ಗೌರವಾಧ್ಯಕ್ಷರಾದ ಶ್ರೀಯುತ ಭವಾನಿಶಂಕರ ರಾವ್, ಅಧ್ಯಕ್ಷರಾದ, ಶ್ರೀಯುತ ಮಾಧವ ರಾವ್, ಉಪಾಧ್ಯಕ್ಷರಾದ ಶ್ರೀಯುತ ವಾಸುದೇವ ಶಾನುಭೋಗ್ ಹಾಗೂ ಶ್ರೀಯುತ ಗೋಪಾಲಕೃಷ್ಣ ರಾವ್, ಕಾರ್ಯದರ್ಶಿ ಶ್ರೀಯುತ ಫಾಲಚಂದ್ರ ಶರ್ಮಾ, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್, ಉಪಾಧ್ಯಕ್ಷರಾದ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿ ಶ್ರೀಮತಿ ಶರಣ್ಯ ರಾಧಾಕೃಷ್ಣ ಹಾಗೂ ಯುವವೇದಿಕೆಯ ಕಾರ್ಯದರ್ಶಿ ಶ್ರೀಯುತ ಅಶ್ವಿನ್‌ರವರ ಉಪಸ್ಥಿತಿಯಲ್ಲಿ, ಶ್ರೀಮತಿ ಸುನೀತಾ ಶ್ರೀಕಾಂತ್ ರಾವ್‌ರವರ ಕಾರ್ಯಕ್ರಮ ನಿರೂಪಣೆಯೊಂದಿಗೆ ಸುಂದರವಾಗಿ ಮೂಡಿಬಂತು. ಆಟೋಟಗಳಲ್ಲಿ ವಿಜೇತರಾದ ಎಲ್ಲರಿಗೂ ಸಭಾಸದರು ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಅಧ್ಯಕ್ಷರಾದ ಶ್ರೀ ಮಾಧವ ರಾವ್ ಇವರು ಸದಸ್ಯರೆಲ್ಲರೂ ಒಟ್ಟಾಗುವ ಇಂತಹ ಕಾರ್ಯಕ್ರಮಗಳು ಎಲ್ಲರ ಸಹಕಾರದಿಂದ ಮತ್ತಷ್ಟು ನೆರವೇರಲಿಯೆಂದು ಹಾರೈಸಿದರು ಮತ್ತು ಕಾರ್ಯಕ್ರಮದ ಆಯೋಜನೆಗಾಗಿ ಮಹಿಳಾ ವೇದಿಕೆಯ ಎಲ್ಲಾ ಪದಾಧಿಕಾರಿಗಳನ್ನು ಶ್ಲಾಘಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಧನ್ಯವಾದ ಸಮರ್ಪಿಸಿ, ಶ್ರೀಯುತ ಪ್ರವೀಣ್ ಮಲ್ಲಮಾರ್ ತಂಡದವರಿಂದ ತಯಾರಿಸಲ್ಪಟ್ಟ ಆಟಿಯ ವಿಶೇಷ ಖಾದ್ಯಗಳನ್ನು ನೆರೆದವರೆಲ್ಲರೂ ಸವಿಯುವುದರೊಂದಿಗೆ, ಕಾರ್ಯಕ್ರಮವು ಸಂಪನ್ನವಾಯಿತು.

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ


## ಸೌರ ಋಗುಪಾಕರ್ಮ

ದಿನಾಂಕ 29-08-2023ರಂದು ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಆಶ್ರಯದಲ್ಲಿ ಪ್ರಾತಃಕಾಲ 6-00ಯಿಂದ ಉಪಾಕರ್ಮ ಹೋಮದೊಂದಿಗೆ ಸೌರ ಋಗುಪಾಕರ್ಮ ನಡೆಯಿತು. ಸಮಾಜದ 40 ಸದಸ್ಯರು ಭಾಗವಹಿಸಿ ನೂತನ ಯಜ್ಞೋಪವೀತ ಧಾರಣೆ ಮಾಡಿರುತ್ತಾರೆ. ಉಪಾಹಾರದ ಪ್ರಾಯೋಜಕತ್ವವನ್ನು ಶ್ರೀ ಬಿ. ಕೆ. ಧನಂಜಯ ರಾವ್ ವಹಿಸಿರುತ್ತಾರೆ.




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ‘ಉಪಾಕರ್ಮ’ವನ್ನು ತಾ. 29-08-2023ರ ಪ್ರಾತಃಕಾಲ 6-00ಕ್ಕೆ ವೇದಮೂರ್ತಿ ಪಾವಂಜೆ ಶ್ರೀ ಜಗದೀಶ್ ಉಪಾಧ್ಯಾಯರು ಮತ್ತು ಅವರ ಸಹೋದರರು ಹೋಮ ಮತ್ತು ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ನಡೆಸಿ ಕೊಟ್ಟರು. 80ಕ್ಕೂ ಹೆಚ್ಚು ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಮತ್ತು ವಿಪ್ರರು ಭಾಗವಹಿಸಿದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್




Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor :* *Sri M. S. Raghunath Rao, Darbe, Puttur*
*Printed at :* *Rajesh Power Press, Darbe - 574 202, Puttur, D. K.*